ಆ) ಬರಗಾಲ ಇರುವ ಪ್ರದೇಶದಲ್ಲಿ ಸರ್ಕಾರದವರು ಯಾವುದಾದರೂ ರಿಯಾಯಿತಿ ತೋರಿಸುವ ಉದ್ದೇಶವಿದೆಯೇ ?

ಶ್ರೀ ಹೆಚ್. ವಿಶ್ವನಾಥಯ್ಯ (ಸಹಕಾರ ಮಂತ್ರಿಗಳು).—

ಅ) ನಬಾರ್ಡ್‌ನವರ ನಿಯಮಗಳ ಅನುಸಾರವಾಗಿ ಕಾರ್ಯರೂಪಕ್ಕೆ ಬರುವುದು.

ಆ) ನಬಾರ್ಡ್‌ನವರ ರಿಯಾಯಿತಿಗಳನ್ನು ಜಾರಿಗೆ ತರುವುದರಿಂದ ಸರ್ಕಾರದವರು ಪ್ರತ್ಯೇಕವಾಗಿ ರಿಯಾಯಿತಿಗಳನ್ನು ತೋರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸಹಕಾರಿ ಸಕ್ಕರೆ ಕಾರ್ಖಾನೆಗಳಿಂದ ಕೊಂಡಿರುವ ಗೋಣಿಚೀಲಗಳ ವಿವರ

೪೩೫. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳಿಂದ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಗೋಣಿಚೀಲಗಳನ್ನು ಖರೀದಿ ಮಾಡಲಾಗಿದೆ ?

ಆ) ಪ್ರತಿಯೊಂದು ಗೋಣಿಚೀಲದ ದರವೇನು ಹಾಗೂ ಬೇರೆ ಬೇರೆ ಸಕ್ಕರೆ ಕಾರ್ಖಾನೆಗಳಿಂದ ಖರೀದಿ ಮಾಡಿರುವ ಗೋಣಿಚೀಲಗಳ ಮೌಲ್ಯದಲ್ಲಿ ವ್ಯತ್ಯಾಸವಾಗಿರುವುದಕ್ಕೆ ಕಾರಣವೇನು ?

ಇ) ೧೯೮೦ರಿಂದ ೧೯೮೭ರವರೆಗೆ ಖರೀದಿಸಿರುವ ಗೋಣಿಚೀಲದ ಮೌಲ್ಯದ ಹಿನ್ನೆಲೆಯಲ್ಲಿ ರಾಷ್ಟ್ರೀಯಗೊಳಿಸಿದ ಗೋಣಿಚೀಲದ ದರವನ್ನು ತುಲನೆ ಮಾಡಿದಲ್ಲಿ ಮೇಲು ನೋಟಕ್ಕೆ ಭ್ರಷ್ಟಾಚಾರ ನಡೆದಿರುವುದು ನಿಜವೇ ?

ಶ್ರೀ ಆರ್. ಬಿ. ಪೋತ್‌ದಾರ್(ಕೈಗಾರಿಕಾ ಸಹಕಾರ ಸಚಿವರು).—

ಅ) ರಾಜ್ಯದಲ್ಲಿರುವ ೧೭ ಸಹಕಾರಿ ಸಕ್ಕರೆ ಕಾರ್ಖಾನೆಗಳ ಪೈಕಿ ೧೯೮೪-೮೫ನೇ ಸಾಲಿಗೆ ಒಂದು ಕಾರ್ಖಾನೆಯು ಮಾಹಿತಿಯನ್ನು ಒದಗಿಸಿಲ್ಲವಾದ್ದರಿಂದ ವಿವರ ಕೊಡಲಾಗಿಲ್ಲ. ೧೯೮೫-೮೬, ೮೬-೮೭ನೇ ಸಾಲುಗಳಿಗೆ ಎಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಾಹಿತಿ ಕೊಡಲಾಗಿದೆ. ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಳೆದ ಮೂರು ವರ್ಷಗಳಲ್ಲಿ ಒಟ್ಟು ೭೫,೭೨,೭೫೬ ಗೋಣಿಚೀಲಗಳನ್ನು ಖರೀದಿ ಮಾಡಿವೆ.

ಆ) ಗೋಣಿಚೀಲದ ದರಗಳು ಕಾರ್ಖಾನೆಯಿಂದ ಕಾರ್ಖಾನೆಗೆ ಮತ್ತು ವರ್ಷದಿಂದ ವರ್ಷಕ್ಕೆ ವ್ಯತ್ಯಾಸ ಇದೆ. ಈ ಮೂರು ವರ್ಷಗಳಲ್ಲಿ ಪ್ರತಿಯೊಂದು ಗೋಣಿಚೀಲದ ಕನಿಷ್ಟ ದರ ರೂ. ೯.೨೦ ಇದ್ದು ಗರಿಷ್ಠ ದರ ರೂ. ೧೯.೪೫ ಇರುತ್ತದೆ. ಕಾರ್ಖಾನೆಗಳು ತಾವು ಕಬ್ಬು ಅರೆಯುವ ಸಾಮರ್ಥ್ಯ ಹಂಗಾಮಿನಲ್ಲಿ ಕಾರ್ಖಾನೆಗೆ ಕಬ್ಬು ದೊರೆಯುವಿಕೆ ಮತ್ತು ಕಬ್ಬಿನಿಂದ ಬರುವ ಸಕ್ಕರೆ ಇಳುವರಿ ಈ ಅಂಕಿಅಂಶಗಳು ಕಾರ್ಖಾನೆಯಿಂದ ಕಾರ್ಖಾನೆಗೆ ವ್ಯತ್ಯಾಸವಿರುವುದರಿಂದ, ಗೋಣಿಚೀಲಗಳ ಮೌಲ್ಯದಲ್ಲಿ ವ್ಯತ್ಯಾಸವಿರಲು ಮುಖ್ಯ ಕಾರಣ.

ಇ) ಭ್ರಷ್ಟಾಚಾರ ನಡೆದಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಹಿಂದೆ ಬಂದಾಗ ವಿಚಾರಣೆ ಮಾಡಿದ ಅಥವಾ ಭ್ರಷ್ಟಾಚಾರ ನಡೆದ ಬಗ್ಗೆ ಯಾವ ಪುರಾವೆ ದೊರಕಲಿಲ್ಲ

ಸೀಬರ್ಡ್ ಯೋಜನೆಯಡಿಯಲ್ಲಿ ಮರುವಸತಿ

೪೩೬. ಶ್ರೀ ಆರ್. ಎನ್ ನಾಯ್ಕ (ಭಟ್ಕಳ್).— ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ''ಸೀಬರ್ಡ್'' ಯೋಜನೆಯಂಡಿಯಲ್ಲಿ ಎಷ್ಟು ಖಾಸಗಿ ಜಮೀನುಗಳನ್ನು ಸರ್ಕಾರದವರು ವಶಪಡಿಸಿಕೊಳ್ಳುತ್ತಾರೆ ?